# ಶ್ರೀ ಸುಧೀಂದ್ರತೀರ್ಥರು

## ಆರಾಧನೆ – ಫಾಲ್ಗುಣ ಕೃಷ್ಣ ದ್ವಿತೀಯ

## ವೃಂದಾವನ – ನವವೃಂದಾವನ (ಆನೆಗೊಂದಿ)

**ಕುಶಾಗ್ರಮತಯೇ ಭಾನುದ್ಯುತಯೇ ವಾದಿಭೀತಯೇ ।**

**ಆರಾಧಿತಶ್ರೀಪತಯೇ ಸುಧೀಂದ್ರಪತಯೇ ನಮಃ ॥**



**ಪೀಠಾಧಿಪತಿಗಳಾಗಿದ್ದ ಕಾಲ – 1614 -1623**

**ಪೂರ್ವಾಶ್ರಮ ನಾಮ ನಾರಾಯಣಾಚಾರ್ಯ**

**ಆಶ್ರಮ ಶಿಷ್ಯರು – ಶ್ರೀ ಶ್ರೀಯಾದವೇಂದ್ರತೀರ್ಥರು**

**ಶ್ರೀ ರಾಘವೇಂದ್ರತೀರ್ಥರು**

**ವಿದ್ಯಾಗುರುಗಳು – ಶ್ರೀ ವಿಜಯೀಂದ್ರತೀರ್ಥರು**

**ಆಶ್ರಮಸ್ವೀಕಾರ ದಿನ**

**1575 ಯುವನಾಮ ಸಂವತ್ಸರ ಚೈತ್ರ ಶುಕ್ಲ ಚತುರ್ದಶಿ**

**ವಾಗ್ವಾದದಲ್ಲಿ ಜಯ** – ಗ್ವಾಲಿಯರ್ ಸಂಸ್ಥಾನದ ಹತ್ತಾರು ಜನ ಪಂಡಿತರು ಶ್ರೀಗಳವರ ಜೊತೆ ವಾಗ್ವಾದಕ್ಕೆ ಬಂದಾಗ, ಅವರನ್ನೆಲ್ಲಾ ಸೋಲಿಸಿ, ಮಹಾವಿಜಯವನ್ನು ಸಂಪಾದಿಸಿದರು. ಇದರಿಂದ ಪ್ರಭಾವಿತನಾದ ಗ್ವಾಲಿಯರ್ ದೊರೆ ಶ್ರೀಗಳವರನ್ನು "ರಾಜಗುರು"ಗಳನ್ನಾಗಿ ಸ್ವೀಕರಿಸಿ ಗೌರವಿಸಿದನು ಮತ್ತು ಸುವರ್ಣಸಿಂಹಾಸನ, ಶ್ವೇತಛತ್ರ, ಚಾಮರಾದಿ ರಾಜಚಿಹ್ನೆಗಳನ್ನು ನೀಡಿ "ದಿಗ್ವಿಜಯ ಸಿಂಹಾಸನಾಧೀಶ್ವರ" ಎಂಬ ಬಿರುದನ್ನಿತ್ತನು.

**ಪ್ರಯಾಣದ/ದಿಗ್ವಿಜಯದ ಸ್ಥಳಗಳು** – ಪುಣ್ಯಪತ್ತನ, ಭಾಗ್ಯನಗರ, ಪಂಡರಾಪುರ, ಕೊಲ್ಹಾಪುರ, ವೆಲ್ಲೂರು, ತಂಜಾವೂರು.

## ರಾಜ ಮರ್ಯಾದೆಗಳು

೧. ಗ್ವಾಲಿಯರ್ ಮಹಾರಾಜ ಸಿಂಧೆಯು ಶ್ರೀಗಳವರನ್ನು ಅಹ್ವಾನಿಸಿ ವೈಭವದಿಂದ ಸ್ವಾಗತ ನೀಡಿ ಸತ್ಕರಿಸಿದನು.

೨. ಸಾಮ್ರಾಟ್ ವೆಂಕಟಪತಿರಾಜನು ಸುಧೀಂದ್ರರಿಗೆ "ರತ್ನಾಭಿಷೇಕ"ಮಾಡಿ ಗೌರವಿಸಿದನು.

೩. ಮೈಸೂರಿನ ನಂಜರಾಜ ಒಡೆಯರು, ಕಾರ್ಕಳದ ಒಂದನೇ ಭೈರವ, ಮಧುರೆಯ ರಾಜ, ಕೊಚ್ಚಿ ಅನಂತಶಯನದ ರಾಜ, ಚಿಂಜಿ ಕೃಷ್ಣಪ್ಪನಾಯಕ, ಇಮ್ಮಡಿ ರಾಮರಾಜ ಮುಂತಾದವರು ಸನ್ಮಾನಿಸಿ ಗೌರವಿಸಿದರು.

೪. **ಕ್ಷಾಮ ಪರಿಹಾರ** – ವಿಜಾಪುರದ ಸುಲ್ತಾನನಾಗಿದ್ದ ಎರಡನೆಯ ಇಬ್ರಾಹಿಂ ಅದಿಲ್‌ಷಹನು ಇವರ ಆಗಮನದಿಂದ ಹರ್ಷಿತನಾಗಿ ಭಿಕ್ಷಾದಿಗಳ ಗೌರವವನ್ನು ನೀಡಿ ಸತ್ಕರಿಸಿದನು. ಅಲ್ಲಿ ಭೀಕರ ಬರಗಾಲ – ಕ್ಷಾಮವುಂಟಾಗಿ ಪ್ರಜೆಗಳು ಕಷ್ಟ–ನಷ್ಟಗಳನ್ನು ಗಮನಿಸಿದ ಶ್ರೀಸುಧೀಂದ್ರರು ಅಲ್ಲಿ 7 ದಿನ ಹವನ–ಹೋಮ, ಪಾರಾಯಣ, ಪೂಜಾಪುರಸ್ಕಾರಗಳನ್ನು ನೆರವೇರಿಸಿ ರಾಜನ ಧಾನ್ಯಾಗಾರದಲ್ಲಿ ಬೀಜಾಕ್ಷರ ಬರೆದು, ಶ್ರೀ ದಿಗ್ವಿಜಯರಾಮರ ಪೂಜಾಕಾರ್ಯಗಳನ್ನು ನೆರವೇರಿಸಿ ಪ್ರಾರ್ಥಿಸಲು, ಅಲ್ಲಿ ಧಾನ್ಯಗಳು ಅಭಿವೃದ್ಧಿಸಿದ್ದುದಲ್ಲದೆ, ಏಳುದಿನ ಪರ್ಯಂತ ಅಖಂಡವೃಷ್ಟಿಯಾಗಿ ಕೆರೆ, ಭಾವಿ, ನದಿಗಳು ತುಂಬಿತುಳುಕಿದವು. ಕ್ಷಾಮವು ಪರಿಹಾರವಾಯಿತು.

೫. **ನಡುಹಗಲಿನಲ್ಲಿ ಸೂರ್ಯನ ಮರೆ** –

ಅದಿಲ್‌ಷಹನು ತನ್ನ ಮಂತ್ರಿಯಾದ ಘನಶ್ಯಾಮರನ್ನು ಗುರುಗಳ ಶಿಷ್ಯನಾಗುವಂತೆ ಸೂಚಿಸಿದನು. ಘನಶ್ಯಾಮರಾಯನು "ಮಳೆ ಬರಿಸಿದ್ದು, ಪಂಡಿತರನ್ನು ಜಯಿಸಿದ್ದು ಅಂತಹ ಮಹತ್ವದ್ದೇನಲ್ಲ, ನಾನು ಅವರ ಶಿಷ್ಯನಾಗಬೇಕಾದರೆ ಅವರು ನಡುಹಗಲಿನಲ್ಲಿ ಒಂದು ಕ್ಷಣವಾದರೂ ಸೂರ್ಯನನ್ನು ಮರೆಮಾಚಬೇಕು. ಆಗ ನಾನು ಕುಟುಂಬಸಮೇತನಾಗಿ ಗುರುಗಳ ಶಿಷ್ಯನಾಗುತ್ತೇನೆ"ಎಂದರು. ಈ ವಿಚಾರ ಶ್ರೀಗಳವರಿಗೆ ತಿಳಿಯಿತು. ಶ್ರೀ ಸುಧೀಂದ್ರತೀರ್ಥರು ದಿಗ್ವಿಜಯರಾಮದೇವರು ಮತ್ತು ಗರುಡವಾಹನ ಶ್ರೀಲಕ್ಷ್ಮೀನಾರಾಯಣ ದೇವರನ್ನು ಉಪೋಷಣದಿಂದ ಸೇವಿಸಿ, ಜಪಮಗ್ನರಾದರು. ಅಘಟಿತಘಟನಾಪಟುವಾದ ಶ್ರೀ ಹರಿ ಒಲಿದರೆ ಯಾವುದು ತಾನೇ ಅಸಾಧ್ಯ? ತನ್ನ ಪರಮ ಭಕ್ತರಾದ ಶ್ರೀಸುಧೀಂದ್ರರ ತಪಸ್ಸಿನಿಂದ ಪ್ರೀತನಾದ ಶ್ರೀಹರಿಯು "ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ"ಎಂಬ ಪ್ರಹ್ಲಾದರಾಜರ ವಚನವನ್ನು ಸತ್ಯಮಾಡಿ ತೋರಿದಂತೆ, ಕೃಷ್ಣಾವತಾರ ಕಾಲದಲ್ಲಿ ಅರ್ಜುನನ ಪ್ರತಿಜ್ಞೆಯನ್ನು ಸತ್ಯಮಾಡಲು ತನ್ನ ಸುದರ್ಶನ ಚಕ್ರದಿಂದ ಸೂರ್ಯನನ್ನು ಮರೆಮಾಡಿದಂತೆ, ಸುಧೀಂದ್ರರ ವಚನವನ್ನು ಮಾನ್ಯಮಾಡಲು ನಡುಹಗಲಿನಲ್ಲಿ ಕ್ಷಣಕಾಲ ಸೂರ್ಯನನ್ನು ಮರೆಮಾಡಿದನು. ಈ ಅಧ್ಭುತ ಪವಾಡವನ್ನು ಕಣ್ಣಾರೆ ಕಂಡ ಸುಲ್ತಾನ, ಮಂತ್ರಿ ಘನಶ್ಯಾಮರಾಯರು ಆಶ್ಚರ್ಯಾನಂದಪೂರ್ಣರಾಗಿ ಗುರುಗಳಿಗೆ ನಮಿಸಿ, ಅವರನ್ನು ಪರೀಕ್ಷಿಸಿದ್ದಕ್ಕೆ ಕ್ಷಮೆ ಬೇಡಿ, ತಮ್ಮ ಕುಟುಂಬಸಮೇತ ಮಾಧ್ವದೀಕ್ಷೆ ಸ್ವೀಕರಿಸಿ, ಮಂತ್ರ ಮುದ್ರಾಧಾರಣೆ ಗುರೂಪದೇಶಗಳನ್ನು ಪಡೆದು ಶ್ರೀಮಠದ ಶಿಷ್ಯನಾದ ಮತ್ತು ತನ್ನ ಸ್ವಂತವಾಗಿದ್ದ **"ಆನೆ ಹೊಸೂರು"** ಎಂಬ ಗ್ರಾಮವನ್ನು ಗುರುಗಳಿಗೆ ದಾನಮಾಡಿದನು.

6. ವೆಂಕಟನಾಥ (ರಾಘವೇಂದ್ರರು)ನಿಗೆ ಒಂದು ಶುಭಮುಹೂರ್ತದಲ್ಲಿ ಸತ್ ಸತ್ಸಂಪ್ರದಾಯ ಪಾಠಪ್ರವಚನ ರಹಸ್ಯವನ್ನು ಆರಂಭಿಸಿ ಇತರ ಶಾಸ್ತ್ರಗಳ ಪ್ರೌಢ ಗ್ರಂಥಗಳನ್ನು ಟೀಕಾಟಿಪ್ಪಣಿಗಳೊಡನೆ ಪಾಠ ಹೇಳಲು ಪ್ರಾರಂಭಿಸಿದರು. ಸುಧೀಂದ್ರತೀರ್ಥರಲ್ಲಿ ವ್ಯಾಕರಣ ಮಹಾಭಾಷ್ಯ, ಜಯದೇವನ ಟೀಕೆ, ಮೀಮಾಂಸಾಗ್ರಂಥಗಳು, ವಿಖ್ಯಾತವಾದ ಭಾಮತೀಗ್ರಂಥ, ಗೌರವ ಮೀಮಾಂಸಾಗ್ರಂಥ, ಅಂದರೆ ಪ್ರಭಾಕರನ ಗ್ರಂಥ ಮತ್ತು ಶ್ರೀವ್ಯಾಸರಾಜರ ತಾತ್ಪರ್ಯ ಚಂದ್ರಿಕಾ, ಮತ್ತಿತರ ಉದ್ಗ್ರಂಥಗಳನ್ನು ಅಧ್ಯಯನ

ಮಾಡುತ್ತಿದ್ದರು. ಸುಮಾರು ಮೂರು ವರ್ಷಗಳ ಕಾಲ ಎಡಬಿಡದೆ ವೆಂಕಟನಾಥನಿಗೆ ಪಾಠಹೇಳಿ ಕೃತಾರ್ಥರಾದರು.

೭. **ಶ್ರೀಯಾದವೇಂದ್ರರಿಗೆ ಸನ್ಯಾಸ** – ತಮ್ಮ ಸೋದರಳಿಯನಿಗೆ ಅವರ ಅಪೇಕ್ಷೆಯಂತೆ ಸನ್ಯಾಸವನ್ನು ನೀಡಿ "ಶ್ರೀಯಾದವೇಂದ್ರತೀರ್ಥ"ರೆಂದು ನಾಮಕರಣ ಮಾಡಿ, ಅವರಿಗೆ ಶ್ರೀಕೃಷ್ಣ, ಲಕ್ಷ್ಮೀನಾರಾಯಣದೇವರ ವಿಗ್ರಹ, ಸಾಲಿಗ್ರಾಮಗಳು, ಪ್ರಾಣದೇವರ ಪ್ರತಿಮೆಗಳನ್ನು ಪೂಜೆಗೆ ಬೇಕಾದ ಎಲ್ಲ ಪಾತ್ರೆ ಪದಾರ್ಥಗಳನ್ನೂ ಅನುಗ್ರಹಿಸು ಅವರನ್ನು ತೀರ್ಥಕ್ಷೇತ್ರಯಾತ್ರೆಗೆ ಕಳುಹಿದರು.

೮. **ವೆಂಕಟನಾಥರಿಗೆ ವೇದಾಂತ ಸಾಮ್ರಾಜ್ಯಾಭಿಷೇಕ** – ತಂಜಾವೂರಿನ ರಾಜನ ಅರಮನೆಯಲ್ಲಿ ವೆಂಕಟನಾಥರಿಗೆ ವೇದಾಂತ ಸಾಮ್ರಾಜ್ಯಾಭಿಷೇಕ ನೀಡಿ, "ಶ್ರೀ ರಾಘವೇಂದ್ರತೀರ್ಥ" ಎಂದು ನಾಮಕರಣ ಮಾಡಿದರು.

೯. ಸುಧೀಂದ್ರತೀರ್ಥ ಶ್ರೀಪಾದಂಗಳವರು ಕ್ರಿ.ಶ. 1623ನೇ ರುಧಿರೋದ್ಗಾರಿ ಸಂವತ್ಸರ ಪಾಲ್ಗುಣ ಬಹುಳ ಬಿದಿಗೆ ಬೆಳಗಿನ ಜಾವ ವೃಂದಾವನ ಪ್ರವೇಶ ಮಾಡಿದರು.

**ಸಮಕಾಲೀನರು** – ಶ್ರೀವ್ಯಾಸರಾಜರು, ಶ್ರೀಪುರಂದರದಾಸರು, ಕನಕದಾಸರು, ವಿಜಯೀಂದ್ರತೀರ್ಥರು, ಇತ್ಯಾದಿ.

## ರಚಿಸಿದ ಗ್ರಂಥಗಳು – ಸುಮಾರು ೧೮

**೧. ಸದ್ಯುಕ್ತಿರತ್ನಾಕರ (ತರ್ಕತಾಂಡವ ವ್ಯಾಖ್ಯಾನಗಳು)**
**೨. ಭಾಗವತ ವ್ಯಾಖ್ಯಾನ (ಏಕಾದಶ ಸ್ಕಂಧ)**
**೩. ಭಾಗವತ ವ್ಯಾಖ್ಯಾನ (ದ್ವಿತೀಯ ಸ್ಕಂಧ)**
**೪. ಅಲಂಕಾರ ಮಂಜರೀ**
**೫. ಅಲಂಕಾರ ನಿಕಷ**
**೬. ಸಾಹಿತ್ಯ ಸಾಮ್ರಾಜ್ಯಮ್**

೭. ಸುಭದ್ರಾ ಪರಿಣಯ:
೮. ಆಪಸ್ತಂಬ ಶುಲ್ವಸೂತ್ರ ಪ್ರದೀಪ:
೯. ವೈರಾಗ್ಯತರಂಗ: (ಕಾವ್ಯ)
೧೦. ದಯಾಲು ಶತಕಮ್
೧೧. ಅಮೃತಹರಣನಾಟಕ
೧೨. ಶ್ರೀವ್ಯಾಸರಾಜಾಭ್ಯುದಯ ಕಾವ್ಯ
೧೩. ಭಾವರತ್ನಮಂಡನ
೧೪. ಓಂಕಾರವಾದ:
೧೫. ಬ್ರಹ್ಮಸೂತ್ರನ್ಯಾಯಸಂಗ್ರಹ
೧೬. ಸಮಾಸಶಕ್ತಿ ನಿರ್ಣಯ:
೧೭. ಪ್ರಣವದರ್ಪಣ ಖಂಡನಮ್
೧೮. ಶ್ರೀ ವಿಜಯೀಂದ್ರ ಯಶೋಭೂಷಣಮ್

**(Source – Kaliyuga Kalpataru, Gurucharite)**